

ಅದಾಯಕ್ಕೆ ಎಲ್ಲಾದರೇನು ಎಂದುಕೊಂಡ. ಅಲ್ಲದೆ ತನ್ನ ಈಗಿನ ಯಜಮಾನನು ಕೊಡುತ್ತಿದ್ದುದಕ್ಕಿಂತ ಹೆಚ್ಚೇ ಸಂಬಳ ಕೊಡುತ್ತಾನೆಂಬುದನ್ನು ಖಚಿತಪಡಿಸಿಕೊಂಡು ಇಲ್ಲಿಗೆ ಬಂದು ಬೀಡುಬಿಟ್ಟು ಭೀಮಣ್ಣನ ಇಟ್ಟಿಗೆ ಭಟ್ಟಿಯ ಸೂತ್ರಧಾರನಾಗಿಬಿಟ್ಟಿದ್ದ.

ಹಾಗೆ ನೋಡಿದರೆ ತನ್ನ ಮತ್ತೊಂದು ಆದಾಯ ಮೂಲವಾದ ಇಟ್ಟಿಗೆ ಭಟ್ಟಿಯ ಚಟುವಟಿಕೆಗಳ ಬಗ್ಗೆ ಏನೇನೂ ಅರಿವಿಲ್ಲದ ಭೀಮಣ್ಣ ಇಟ್ಟಿಗೆ ಭಟ್ಟಿಯ ಸಮಸ್ತ ಉಸ್ತುವಾರಿಯನ್ನು ದೊರೆಸಾಮಿಗೆ ಬಿಟ್ಟು ಅದರಲ್ಲಿ ಬರುವ ಆದಾಯವನ್ನು ಜೇಬಿಗಿಳಿಸಿಕೊಳ್ಳುತ್ತಾ ತನ್ನ ರಾಜಕೀಯದ ಗೋಜಲುಗಳೊಳಗೆ ಕಳೆದುಹೋಗಲು ಹವಣಿಸುತ್ತಿದ್ದ. ಅದೇ ಭಟ್ಟಿಯಲ್ಲಿಯೆ ರಾಮಕ್ಕನೂ ತನ್ನ ಹಳ್ಳಿಯ ಇತರ ಮಹಿಳಾ ಕಾರ್ಮಿಕರ ಜೊತೆ ಇಟ್ಟಿಗೆ ಬಿಡುವ ಕಾಯಕ ಮಾಡಿಕೊಂಡಿದ್ದಳು. ದೊರೆಸಾಮಿಯ ಆಟಾಟೋಪದ ಭರದಲ್ಲಿ ಇಟ್ಟಿಗೆ ಭಟ್ಟಿಯ ಯಜಮಾನ ಭೀಮಣ್ಣನೋ ಅಥವಾ ದೊರೆಸಾಮಿಯೋ ಎಂಬ ಅನುಮಾನ ಆಗಾಗ ಕಾಡುತ್ತಿದ್ದರೂ, 'ತನಗೇನಾಗಬೇಕು ತನ್ನ ಸಂಬಳ